ಓ ಎಸ್ ಃ **198/2015** **ಪಿ. ಡಬ್ಲ್ಯೂ-1**

ಸಾಕ್ಷಿಯನ್ನು ದಿಃ 12.04.2019 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ. ಎಸ್.ಬಿ.ಎಸ್ ವಕೀಲವರಿಂದಃ

ಸಿದ್ದರಾಜು ತಂದೆ ಬಸವೇಗೌಡ, ವಯಸ್ಸು 43, ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ದಿಃ09.10.2012 ರಲ್ಲಿ ಪ್ರತಿವಾದಿಯವರು ನನಗೆ ಬರೆದುಕೊಟ್ಟಿರುವ ಆನ್ ಡಿಮಾಂಡ್ ಪ್ರಾಮಿಸರಿ ನೋಟ್‌ನ ಮೂಲ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸದರಿ ನಿಪಿ 1 ಕ್ಕೆ ಸಾಕ್ಷಿಗಳಾಗಿ ಸಿದ್ದರಾಜು ಮತ್ತು ಮಹೇಶ ಎನ್ನುವವರು ಸಹಿ ಮಾಡಿರುತ್ತಾರೆ ಅದನ್ನು ನಿಪಿ 1 ಎ ಮತ್ತು ನಿಪಿ 1 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಶ್ರೀಕಂಠರಾವ್ ಎಂಬುವವರು ಬಿಕ್ಲಾಮದಾರರಾಗಿ ಸಹಿ ಮಾಡಿರುತ್ತಾರೆ ಅದನ್ನ ನಿಪಿ 1 ಸಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೇ ಪ್ರತಿವಾದಿಯವರು ನನ್ನ ಮುಂದೆ ಹೆಬ್ಬೆಟ್ಟು ಹಾಕಿರುತ್ತಾರೆ. ನಿಪಿ 1 ರಲ್ಲಿ ಸದರಿ ದಾಖಲೆಗೆ ಹಣಸಂದಾಯ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಅದಕ್ಕೆ ಪ್ರತಿವಾದಿಯವರು ತಮ್ಮ ಹೆಬ್ಬೆಟ್ಟು ಹಾಕಿರುತ್ತಾರೆ. ನಿಪಿ 2 ಕ್ಕೆ ಸಿದ್ದರಾಜು ಮತ್ತು ಮಹೇಶ ಎಂಬುವವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಅದನ್ನು ನಿಪಿ 2 ಎ ಮತ್ತು ನಿಪಿ 2 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಶ್ರೀಕಂಠರಾವ್ ಅವರು ಬಿಕ್ಲಾಮದಾರರಾಗಿ ಸಹಿ ಮಾರಿರುತ್ತಾರೆ ಅದನ್ನು ನಿಪಿ 2 ಸಿ ಎಂದು ಗುರುತಿಸಲಾಯಿತು. ದಿಃ 07.01.2015 ರಂದು ನೀಡಿರುವ ಚಿಕ್ಕಯ್ಯಾ ಅವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ದಿಃ12.06.2015 ರಲ್ಲಿ ಗ್ರಾಮಲೇಕ್ಕಾಧಿಕಾರಿಯವರು ನೀಡಿರುವ ಪತ್ರವನ್ನು

ಹಾಜರುಪಡಿಸಿದ್ದೇನೆ ಈ ಹಂತದಲ್ಲಿ ಪ್ರತಿವಾದಿಪರ ವಕೀಲರು ಸಂಬಂಧಪಟ್ಟ ಅಧಿಕಾರಿಯವರು ನೀಡಿರುವುದಿಲ್ಲ ಎಂದು ತಕರಾರು ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ವಂಶವೃಕ್ಷವನ್ನು ತಕರಾರಿಗೆ ಒಳಪಟ್ಟು ನಿಪಿ 4 ಎಂದು ಗುರುತಿಸಲಾಯಿತು. ದಿಃ15.06.2015 ರಂದು ಪ್ರತಿವಾದಿಗೇ ಹೇಳಿರುವ ಸೂಚನಾ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. 7 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 6 ರಿಂದ 12 ಎಂದು ಗುರುತಿಸಲಾಯಿತು. 4 ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 13 ರಿಂದ 16 ಎಂದು ಗುರುತಿಸಲಾಯಿತು.

ದಿಃ23.06.2015 ರಂದು ಪ್ರತಿವಾದಿಯವರು ನೀಡಿರುವ ಪ್ರತಿಉತ್ತರ ನೋಟೀಸ್ನು ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 17 ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ., ಟಿ.ನರಸೀಪುರ